# ಸ್ಮರಣೀಯರು....

★ ನನ್ನನ್ನು ಸಂಶೋಧನಾ ವಿದ್ಯಾರ್ಥಿಯಾಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಸಂದರ್ಭದಲ್ಲಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಈ ಪ್ರಬಂಧವು ಪೂರ್ಣಗೊಳ್ಳಲು ಸಹಕಾರ ನೀಡಿದ ಮಾರ್ಗದರ್ಶಕರು, ಗುರುಗಳು ಆದ ಡಾ.ಕೆ. ಕೇಶವ ಶರ್ಮ ಇವರನ್ನು ಆತ್ಮೀಯವಾಗಿ ನೆನಪು ಮಾಡಿಕೊಳ್ಳುವೆ.

★ ಕನ್ನಡ ಭಾರತಿ ವಿಭಾಗದ ನನ್ನ ವಿದ್ಯಾಗುರುಗಳಾದ ಪ್ರೊ.ಶ್ರೀಕಂಠ ಕೂಡಿಗೆ, ಪ್ರೊ.ತೀ.ನಂ. ಶಂಕರನಾರಾಯಣ, ಡಾ.ಬಸವರಾಜ ನೆಲ್ಲಿಸರ, ಡಾ.ಸಿ.ಎಸ್.ಶಿವಕುಮಾರಸ್ವಾಮಿ ಮತ್ತು ಡಾ.ಸಣ್ಣರಾಮ, ಡಾ.ರಂಗರಾಜ ವನದುರ್ಗ, ಡಾ.ಜಿ.ಪ್ರಶಾಂತ ನಾಯಕ ಇವರ ಮಾರ್ಗದರ್ಶನ ಹಾಗು ಪ್ರೋತ್ಸಾಹವನ್ನು ಸ್ಮರಿಸುವೆ.

★ ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗದರ್ಶನ ನೀಡಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಹಿರಿಯ ಕವಿಗಳಾದ ಡಾ|| ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಮತ್ತು ಶಿವಮೊಗ್ಗ ಮುನೀರ್ ಇವರಿಗೆ ನನ್ನ ಕೃತಜ್ಞತೆಗಳು.

★ ಸಂದರ್ಶನದಲ್ಲಿ ಪಾಲ್ಗೊಂಡು ಪ್ರಶ್ನೆಗಳಿಗೆ ಉತ್ತರಿಸಿರುವ ಕವಿಗಳಾದ ಶ್ರೀ ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ,ಕೆ.ಎಸ್.ನಿಸಾರ್ ಅಹ್ಮದ್ , ಹೆಚ್.ಎಸ್. ವೆಂಕಟೇಶ್‌ಮೂರ್ತಿ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಬಿ. ಸಿ. ರಾಮಚಂದ್ರ ಶರ್ಮ, ಕಲಾವಿದರಾದ ಸಿ. ಅಶ್ವತ್ಥ್, ಶಿವಮೊಗ್ಗ ಸುಬ್ಬಣ್ಣ, ಗರ್ತಿಕೆರೆ ರಾಘಣ್ಣ, ಹೆಚ್. ಆರ್. ಲೀಲಾವತಿ, ಎ. ಸುಂದರಮೂರ್ತಿ, ವೈ. ಕೆ. ಮುದ್ದುಕೃಷ್ಣ - ಮೊದಲಾದವರಿಗೆ ನನ್ನ ಆತ್ಮೀಯ ಕೃತಜ್ಞತೆಗಳು.

★ನನ್ನ ಕಾಲೇಜಿನ ಪ್ರಾಚಾರ್ಯರಾದ ಇಂದುಮತಿ ಹೆಚ್., ಚಂದ್ರಮೌಳಿ ಸಾಗರ ಮತ್ತು ಜಾನಪದ ವಿದ್ವಾಂಸರಾದ ಹುಚ್ಚಪ್ಪ ಮಾಸ್ತರ್ ಇವರ ಪ್ರೇರಣೆಯನ್ನು ಇಲ್ಲಿ ಸ್ಮರಿಸುವೆ.

★ ನನ್ನ ಸಂಶೋಧನಾ ಕಾರ್ಯದಲ್ಲಿ ಅನೇಕ ವಿಧವಾಗಿ ತಮ್ಮ ಸಹಕಾರ ನೀಡಿರುವ ಗೆಳೆಯರಾದ ಸಣ್ಣ ಹನುಮಂತಪ್ಪ ,ಭರಮಗೌಡರ,ಹಾ ಉಮೇಶ್, ಹೆಚ್.ಎಸ್.ಮೋಹನ, ಓಂಕಾರ್ ನಾಯ್ಕ ,ಟಿ. ರಾಜೇಂದ್ರ,ವಾಸುದೇವ ಮತ್ತು ನನ್ನ ಸಹೋದ್ಯೋಗಿಗಳನ್ನು ನೆನೆಯುವೆ.

★ ನನ್ನ ಕುಟುಂಬ , ಗೆಳೆಯರು, ಹಿತೈಷಿಗಳೆಲ್ಲರಿಗೂ ಧನ್ಯವಾದಗಳು.

★ ಈ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಗೆಳೆಯ ರಾಜೇಶ ಭಡ್ತಿ ,ವಿ.ಅತ್ರಿ ಮತ್ತು ಕು.ಫಾಮಿದಾ ಬಾನು ಇವರಿಗೆ ನನ್ನ ಧನ್ಯವಾದಗಳು.